ದಿನಾಂಕ: 15-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಎಮ್.ಡಿ.ಟಿ. 2ನೇ ಎದುರುದಾರ ಪರ ವಕೀಲರಿಂದಃ**

ಅರ್ಜಿದಾರರಿಗೆ ನಾನು ಚಿಕಿತ್ಸೆ ಕೊಟ್ಟಿರುತ್ತೇನೆ. ಅಪಘಾತ ಆದ ನಂತರ ಚಿಕಿತ್ಸೆಗಾಗಿ ಅರ್ಜಿದಾರರು ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಅರ್ಜಿದಾರರು ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲ ಆದ ತಕ್ಷಣ ಗೋಕಾಕ ಶಹರ ಪೊಲೀಸ ಠಾಣೆಗೆ ಮಾಹಿತಿ ಕಳಿಸಿರುತ್ತೇನೆ.

2. ಅರ್ಜಿದಾರರು ನಮ್ಮ ಆಸ್ಪತ್ರೆಯಲ್ಲಿ 04/01/2024 ರಿಂದ 13/01/2024 ರ ವರೆಗು ಒಳರೋಗಿಯಾಗಿ ದಾಖಲ ಇದ್ದರು. ಅರ್ಜಿದಾರರಿಗೆ ಆದ ಗಾಯಕ್ಕೆ ಶಸ್ತ್ರ ಚಿಕಿತ್ಸೆ ಮಾಡಿರುತ್ತೇನೆ. ಅರ್ಜಿದಾರರ ಮೂಳೆ ಮುರಿತಕ್ಕೆ ಅಳವಡಿಸಿದ ಒಳಜೋಡನೆಗಳು ಇನ್ನು ಇರುತ್ತವೆ. ಅರ್ಜಿದಾರರು ದಿನಾಂಕ 13/01/2024 ರಂದು ನಮ್ಮ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಮುಂದುವೆದ ಚಿಕಿತ್ಸೆ ಪಡೆಯಲು ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಅರ್ಜಿದಾರರು ಮುಂದುವರೆದ ಚಿಕಿತ್ಸೆಗಾಗಿ ಬಂದಿದ್ದರು ಎಂದು ತೋರಿಸಲು ದಾಖಲೆಯನ್ನು ಹಾಜರ ಮಾಡಿಲ್ಲ. ಅರ್ಜಿದಾರರು ಮುಂದುವರೆದ ಚಿಕಿತ್ಸೆ ಪಡೆಯಲ ನಮ್ಮ ಆಸ್ಪತ್ರೆಗೆ ಬರದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಅರ್ಜಿದಾರರಿಗೆ ಆದಂತಹ ಗಾಯ ಪೂರ್ತಿಯಾಗಿ ವಾಸಿಯಾಗಲು 9 ರಿಂದ 18 ತಿಂಗಳ ಸಮಯ ಬೇಕಾಗುತ್ತದೆ. ಅರ್ಜಿದಾರರ ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಅರ್ಜಿದಾರರು ನಮ್ಮ ಆಸ್ಪತ್ರೆಯಿಂದ ಬಿಡುಗಡೆ ಆದ 01 ವರ್ಷದ ನಂತರ ಕೊಟ್ಟಿದ್ದೇನೆ ಎಂದರೆ ಸರಿ. ಅರ್ಜಿದಾರರ ಅಂಗ ನ್ಯೂನ್ಯತೆ ಪ್ರಮಾಣ ಪತ್ರ ಕೊಡುವಾಗ ಅವರ ಮೂಳೆ ಮುರಿತ ಅಂಕು-ಡೊಂಕಾಗಿ ಕೂಡಿಕೊಂಡಿತ್ತು. ಅಂಗ ನ್ಯೂನ್ಯತೆ ಪ್ರಮಾಣ ಪತ್ರದಲ್ಲಿ ಅರ್ಜಿದಾರರ ಮೂಳೆ ಮುರಿತ ಅಂಕು-ಡೊಂಕಾಗಿ ಕೂಡಿಕೊಂಡಿದೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

4. ಅರ್ಜಿದಾರರ ಮೂಳೆ ಮುರಿತಕ್ಕೆ ಒಳಜೋಡನೆ ಅಳವಡಿಸಿದ್ದರಿಂದ ಅರ್ಜಿದಾರರ ಬಲಗಾಲಿನ ಚಲನವಲನಕ್ಕೆ ತೊಂದರೆ ಇದೆ ಎಂದರೆ ಸರಿಯಲ್ಲ. ಮೂಳೆ ಮುರಿತಕ್ಕೆ ಅಳವಡಿಸಿದ ಒಳಜೋಡನೆಗಳು ಪೂರ್ತಿಯಾಗಿ ತೆಗೆದ ನಂತರವೇ ಸರಿಯಾದ ಅಂಗ ನ್ಯೂನ್ಯತೆ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಶೇ.38 ರಷ್ಟು ಅಂಗ ನ್ಯೂನ್ಯತೆ ಇದೆ ಎಂದು ತೋರಿಸಲು ನಾನು ಲೆಕ್ಕ ಹಾಕಿದ ಬಗ್ಗೆ ದಾಖಲೆ ಹಾಜರ ಮಾಡಿಲ್ಲ. ಅರ್ಜಿದಾರರನ್ನು ನಾನು ವೈದ್ಯಕೀಯವಾಗಿ ಪರೀಕ್ಷೆ ಮಾಡಿ ಅವರಿಗೆ ಶೇ.38 ರಷ್ಟು ಅಂಗ ನ್ಯೂನ್ಯತೆ ಇದ ಎಂದು ಹೇಳಿದ್ದೇನೆ ಎಂದರೆ ಸರಿ. ಅರ್ಜಿದಾರರಿಗೆ ಆದಂತಹ ಮೂಳೆ ಮುರಿತಕ್ಕೆ ಕೇಂದ್ರ ಸರಕಾರದ ಅಧಿಸೂಚನೆ ಪ್ರಕಾರ ಗರಿಷ್ಠ ಶೇ.35 ರಷ್ಟು ಅಂಗ ನ್ಯೂನ್ಯತೆ ಇದೆ ಎಂದರೆ ಸರಿಯಲ್ಲ.

5. ನಿಪಿ-10 ನಮ್ಮ ಆಸ್ಪತ್ರೆಯಲ್ಲಿಯ ಔಷಧಿ ಅಂಗಡಿಯದು ಇರುತ್ತದೆ ಎಂದರೆ ಸರಿ ಹಾಗೂ ಅದರಲ್ಲಿ ನಮ್ಮ ಆಸ್ಪತ್ರೆ ಬಿಲ್ಲು ಸಹ ಒಳಗೊಂಡಿದೆ ಎಂದರೆ ಸರಿ. ಅರ್ಜಿದಾರರಿಗೆ ಯಾವುದೇ ತರಹದ ತೊಂದರೆ ಇರುವುದಿಲ್ಲ, ಆದ್ದರಿಂದ ಅರ್ಜಿದಾರರಿಗೆ ಯಾವುದೇ ಅಂಗ ನ್ಯೂನ್ಯತೆ ಬರದೇ ಇದ್ದರೂ ಸಹ ಶೇ.38 ರಷ್ಟು ಅಂಗ ನ್ಯೂನ್ಯತೆ ಇದೆ ಎಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ